A.—Sri T. CHANNIAH (Minister for Public Health and Local Self-Government).—

(*a*) 1936.

		Rs. a. p.
(*b*)	Income ..	1,577-9-6.
	Expenditure ..	216-6-6.

(*c*) Yes; there was one petition.

(*d*) No.

ಶ್ರೀ ಜೆ. ನಾರಾಯಣಪ್ಪ.—ಆದಾಯ 1,577-9-6 ರೂಪಾಯಿಗಳು ಎಂದು ಹೇಳಿರುವುದು ಯಾವುದರಿಂದ ಬಂದಿದೆ ?

ಶ್ರೀ ಟಿ. ಚನ್ನಯ್ಯ.—ಫಾರೆಸ್ಟ್ ಪ್ರಾಡ್ಯೂಸ್‌ನಿಂದ ಅರಣ್ಯ ಸಂಪತ್ತಿನಿಂದ, ಮರಗಿಡಗಳ ಮಾರಾಟದಿಂದ ಮತ್ತು ಫ್ಯೂಯಲ್ ಕೂಪ್‌ನ ಹರಾಜುಮಾಡಿರುವುದರಿಂದ.

ಶ್ರೀ ಜೆ. ನಾರಾಯಣಪ್ಪ.—ಫಾರೆಸ್ಟ್ ಗಾರ್ಡ್‌ನ್ನು ಸರ್ಕಾರದವರು ಇಟ್ಟಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಇಟ್ಟಿದೆ.

ಶ್ರೀ ಜೆ. ನಾರಾಯಣಪ್ಪ.—ಒಂದು ವರ್ಷಕ್ಕೆ ಅವರಿಗೆ ಕೊಡುವ ಸಂಬಳವೆಷ್ಟು ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಜೆ. ನಾರಾಯಣಪ್ಪ.—ನನ್ನ ಅಂದಾಜು ಪ್ರಕಾರ ಒಂದು ತಿಂಗಳಿಗೆ 33 ರೂಪಾಯಿನಂತೆ ವರ್ಷಕ್ಕೆ 396 ರೂಪಾಯಿ ಆಗಬಹುದಲ್ಲವೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್ ಬೇಕೆಂದು ಹೇಳಿದೆ.

ಶ್ರೀ ಜೆ. ನಾರಾಯಣಪ್ಪ.—16 ವರ್ಷಗಳ ಲಾಗಾಯ್ತು ಗೋಮಾಳ ಫಾರೆಸ್ಟಿಗೆ ಸೇರುತ್ತಿದೆ. 16 ವರ್ಷಗಳಿಂದ ಸುಮಾರು 6 ಸಾವಿರ ರೂಪಾಯಿಗಳು ಖರ್ಚಾಗಿರುವಾಗ 216 ರೂಪಾಯಿ ಖರ್ಚಾಗಿದೆಯೆಂದು ಹೇಳಿದೆ, ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಎಷ್ಟು ಖರ್ಚಾಗಿದೆಯೋ ಅದನ್ನು ಕೊಟ್ಟಿದೆ.

ಶ್ರೀ ಜೆ. ನಾರಾಯಣಪ್ಪ.—ಗಾರ್ಡಿಗೆ ಕೊಡುವ ಸಂಬಳ ಖರ್ಚಿನಲ್ಲಿ ಸೇರಬೇಡವೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಜೆ. ನಾರಾಯಣಪ್ಪ.—ಈಗ ದೇವರಹಳ್ಳಿ, ಕದರಿಪುರ, ಶೀತಪ್ಪನಹಳ್ಳಿ, ಪಿಂಡಪಾಪನಹಳ್ಳಿ ಗ್ರಾಮಗಳ ಗೋಮಾಳವನ್ನು ಫಾರೆಸ್ಟಿಗೆ ಸೇರಿಸಿದೆ. ಆದರೆ ಮಾದಮಂಗಲ, ಎಲಲಗೆರೆ ಗ್ರಾಮಗಳ ಗೋಮಾಳವನ್ನು ರೈತರು ಕೇಳಿದ ಮೇಲೆ ಗ್ರಾಮ ಫಾರೆಸ್ಟಿಗೆ ಕೊಟ್ಟಿದೆ. ಅದೇ ರೀತಿಯಲ್ಲಿ ಅರ್ಜಿ ಕೊಟ್ಟರೂ ದೇವರಹಳ್ಳಿ ಗ್ರಾಮದ ಗೋಮಾಳವನ್ನು ಗ್ರಾಮ ಪಂಚಾಯಿತಿಗೇಕೆ ಕೊಡಲಲ್ಲ ?

ಶ್ರೀ ಟಿ. ಚನ್ನಯ್ಯ.—ಅರಣ್ಯ ಸಂಪತ್ತನ್ನು ವೃದ್ಧಿ ಮಾಡಬೇಕಾಗಿರುವುದರಿಂದ ಕೊಡಲು ಸಾಧ್ಯವಾಗಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಆ ಗೋಮಾಳದಿಂದ ಆದಾಯವಿಲ್ಲ, ಅಲ್ಲಿ ಮುಳ್ಳು ಮಾತ್ರವಿದೆ. ಹಿಂದೆ ಆರು ಗ್ರಾಮಗಳ ಗ್ರೂಪ್ ಪಂಚಾಯಿತಿಯಿದ್ದರೂ ಕೇವಲ 60 ರೂಪಾಯಿಗಳ ಆದಾಯವಿತ್ತು. ಆದ್ದರಿಂದ ಪಕ್ಕದ ಗ್ರಾಮಗಳವರಿಗೆ ಕೊಟ್ಟಿರುವಂತೆ ನಾನು ಕೇಳಿರುವ ಗ್ರಾಮಗಳವರಿಗೂ ಗೋಮಾಳ ಪಾಪನು ಕೊಡಲು ಸಾಧ್ಯವಿಲ್ಲವೆ ?

ಶ್ರೀ ಟಿ. ಚನ್ನಯ್ಯ.— ಇಲ್ಲ.

ಶ್ರೀ ವಿ. ಆರ್. ನಾಯ್ಡು.—ಪ್ರಶ್ನೆ ಕೇಳುವುದು ಉತ್ತರ ಹೇಳುವುದಕ್ಕೆ ಅಲ್ಲವೇ, ಸ್ವಾಮಿ?

Mr. SPEAKER.—Have you got any supplementary, Sri Naidu? That is not a question relating to this subject.

ಶ್ರೀ ಎಸ್. ಎಂ. ಮರಿಯಪ್ಪ.—ಗೋಮಾಳವನ್ನು ಮನ್ನಾಜಂಗಲಿಗೆ ಸೇರಿಸುವಾಗ ಸರ್ಕಾರ ಅನುಸರಿಸುವ ಕ್ರಮವೇನು ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಗೋಮಾಳ ಜಮೀನುಗಳನ್ನು ಫಾರೆಸ್ಟಿಗೆ ಸೇರಿಸಿಕೊಳ್ಳುತ್ತಾರೆ.

ಶ್ರೀ ಎಸ್. ಎಂ ಮರಿಯಪ್ಪ.—ಮನ್ನಾಜಂಗಲಿಗೆ ಹಾಗೆ ಸೇರಿಸುವಾಗ ರೈತರಿಗಿರುವ ಹಕ್ಕು ಬಾಧ್ಯತೆಗಳನ್ನು ಸರ್ಕಾರ ಏನು ಕಾಪಾಡಿದೆ, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಕಾನೂನು ಪ್ರಕಾರ ಹಕ್ಕು ಬಾಧ್ಯತೆಗಳೇನಿವೆಯೋ ಅವುಗಳನ್ನು ನಾವು ಕಾಪಾಡಿಕೊಂಡು ಬರುತ್ತೇವೆ.

ಶ್ರೀ ಎಸ್. ಎಂ. ಮರಿಯಪ್ಪ.—ಹಾಗಾದರೆ ಸ್ಟೇಟ್ ಫಾರೆಸ್ಟ್ ಮಧ್ಯದಲ್ಲಿರುವ ಗ್ರಾಮಸ್ಥರು ಆ ಕಾಡಿಗೆ ಹೋಗಿ ದನಗಳನ್ನು ಮೇಯಿಸುವುದಕ್ಕೆ ಸರ್ಕಾರಕ್ಕೆ ಏನಾದರೂ ಹುಲ್ಲು ಬನ್ನಿ ಕೊಡಬೇಕೆ ?

ಶ್ರೀ ಟಿ. ಚನ್ನಯ್ಯ.—ಉಚಿತವಾಗಿ ಗೋವುಗಳನ್ನು ಮೇಯಿಸಬಹುದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಸುತ್ತಮುತ್ತಲಿರುವ ರೈತರು ಮನ್ನಾ ಜಂಗಲಿನಿಂದ ಸೌದೆ ತರುವುದಕ್ಕೆ ಅಥವಾ ಬಿದಿರು ಮುಳ್ಳು ತರುವುದಕ್ಕೆ ಸರ್ಕಾರಕ್ಕೆ ದುಡ್ಡು ಕೊಡಬೇಕೇ ?

ಶ್ರೀ ಟಿ. ಚನ್ನಯ್ಯ.—ಫಾರೆಸ್ಟಿನಿಂದ ಸೌದೆ ವಗೈರೆ ಏನಾದರೂ ತರಬೇಕಾದರೆ ರೆವೆನ್ಯೂ ಅಧಿಕಾರಿಗಳಿಂದ ಅನುಮತಿ ಪಡೆದು ತರಬೇಕಾಗುತ್ತದೆ.

ಶ್ರೀ ಜಿ. ದುಗ್ಗಪ್ಪ.—ಲ್ಯಾಂಡ್ ರೆವೆನ್ಯೂ ಕೋಡಿನ ಪ್ರಕಾರ ಪ್ರತಿಯೊಂದು ಹಳ್ಳಿಗೂ ದಾಮಾಷಾ ಪ್ರಕಾರ ಗೋಮಾಳವಿರಬೇಕಲ್ಲವೆ ?

ಅಧ್ಯಕ್ಷರು.—ಅದು ಗೊತ್ತೇ ಇದೆ.

Brush Wood Anicuts to Feeder Channels in Yelandur and Chamarajanagar Taluks.

Q.—104. Sri B. RACHIAH (Yelandur—Scheduled Castes).—

Will the Government be pleased to state:—

(*a*) the names of the feeder channels to which Government have proposed and promised to construct brush wood anicuts across Suvarnavathi in Yelandur and Chamarajanagar Taluks;

(*b*) the names of channels for which estimates have been prepared;

(c) the names of channels, for which estimates have not been prepared for want of amount for preliminary survey;

(*d*) the names of channels for which estimates have already been sanctioned?

A.—Sri KADIDAL MANJAPPA (Minister for Revenue and Public Works).—

(*a*) *Chamarajanagar Taluk.*—
(1) Muralyhalla channel,
(2) Saragur channel,
(3) Alur new channel,
(4) Homma channel,
(5) Alur old channel,
(6) Kudlur channel,
(7) Hosahalli old channel, and
(8) Hosahalli new channel.

Yelandur Taluk.—
(1) Amble feeder channel,
(2) Yelandur tank feeder channel,
(3) Yeriyur tank feeder channel, and
(4) Maddur tank feeder channel.

(*b*) Sargur channel and Homma channels.

(*c*) (1) Amble feeder channel.
(2) Yelandur tank feeder channel.
(3) Yariyur tank feeder channel.
(4) Maddur tank feeder channel in Yelandur Jahagir Taluk.

(*d*) Hosahalli new channel.

ಶ್ರೀ ಬಿ. ರಾಚಯ್ಯ.—ಯಾವಾಗ ಬ್ರುಷ್ ವುಡ್ ಅಣೆಕಟ್ಟುಗಳು ಪ್ರಾರಂಭವಾದವು?

ಶ್ರೀ ಕಡಿದಾಳ್ ಮಂಜಪ್ಪ.—ಕರಾರುವಾಕ್ಕಾಗಿ ತಾರೀಖು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಎಷ್ಟುವರ್ಷಗಳಿಂದ ರೈತರು ಕೇಳುತ್ತಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ವರ್ಷಗಳಿಂದ.

ಶ್ರೀ ಬಿ. ರಾಚಯ್ಯ.—ಈ ವರ್ಷ ಬಡ್ಜೆಟ್ಟಿನಲ್ಲಿ ಬ್ರುಷ್‌ವುಡ್ ಅಣೆಕಟ್ಟು ಕಟ್ಟಲು ಹಣ ಒದಗಿಸಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಬಡ್ಜೆಟ್ ನೋಡಿ.

ಶ್ರೀ ಬಿ. ರಾಚಯ್ಯ.—ಪ್ರತ್ಯೇಕವಾಗಿ ಕೊಟ್ಟಿಲ್ಲವೆಂದು ಹೇಳಿದರೆ ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಬಡ್ಜೆಟ್ ನೋಡಿ ಹೇಳಬೇಕು. ತಾವೇ ನೋಡಿ.

ಶ್ರೀ ಬಿ. ರಾಚಯ್ಯ.—ಕೊಟ್ಟಿಲ್ಲವೆಂದು ಕಾಣುತ್ತದೆ, ಒದಗಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಯಳಂದೂರು ಜಹಗೀರಿಯಲ್ಲಿರುವ ಯೋಜನೆಯನ್ನು ಅವರೇ ತೆಗೆದು ಕೊಳ್ಳಬೇಕು. ಚಾಮರಾಜನಗರ ತಾಲ್ಲೂಕಿನಲ್ಲಿ ಎರಡು ಏದಾಜುಗಳಿವೆ. ಹೊಸಹಳ್ಳಿನಾಲೆ ಕಲಸವಾಗಿದೆ; ಚಾಮರಾಜ ನಗರದಲ್ಲಿ ಮುಂಜೂರಾದ ಕೂಡಲೆ ಕೆಲಸ ತೆಗೆದುಕೊಳ್ಳುತ್ತೇವೆ. ಯಳಂದೂರ ಜಹಗೀರಿ ನೀರಾವರಿ ಯೋಜನೆ ತೆಗೆದುಕೊಳ್ಳುವುದಕ್ಕೆ 1½ ಲಕ್ಷ ರೂಪಾಯಿ ಜಹಗೀರಿ ಫಂಡಿನಿಂದ ಕೊಟ್ಟಿದ್ದಾರೆ. ಸಾಧ್ಯವಾದರೆ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಚಾಮರಾಜನಗರ ತಾಲ್ಲೂಕಿನಲ್ಲಿ ಒಂದು ಬ್ರುಷ್‌ವುಡ್ ಅಣೆಕಟ್ಟಿಗೆ ಎಷ್ಟು ಖರ್ಚಾಗುತ್ತದೆಂದು ಅಂದಾಜಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವಕ್ಕೆ ಎಸ್ಟಿಮೇಟ್ ಆಗಿಲ್ಲ.

ಶ್ರೀ ಬಿ. ರಾಚಯ್ಯ.—ಈಗ ಆಗಿರುವ ಹೊಸಹಳ್ಳಿ ನಾಲೆಗೆ?

ಶ್ರೀ ಕಡಿದಾಳ್ ಮಂಜಪ್ಪ.—9 ಸಾವಿರ ರೂಪಾಯಿಗಳು.

ಶ್ರೀ ಬಿ. ರಾಚಯ್ಯ.—ಅದೇ ರೀತಿಯಲ್ಲಿ ಇಷ್ಟು ನಾಲೆಗಳು ಒಂದು ಲಕ್ಷದಲ್ಲಿ ಆಗುತ್ತವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು.

ಶ್ರೀ ಬಿ. ರಾಚಯ್ಯ.—ಪ್ರೈವಾರ್ಷಿಕಯೋಜನೆಯಲ್ಲಿ ನಾಲ್ಕು ಫೀಡರ್ ಅಣೆಕಟ್ಟುಗಳನ್ನು ಕಟ್ಟಬೇಕೆಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆಯಲ್ಲಿದೆ. ಪ್ರೈವಾರ್ಷಿಕ ಯೋಜನೆಯಲ್ಲಿ ಸೇರಿದೆಯೆ ಇಲ್ಲವೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಅತ್ಯಗತ್ಯವಾಗಿ ಇದನ್ನು ಸೇರಿಸಬೇಕು ಎಂಬುದನ್ನು ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ 1½ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. ಆವಶ್ಯಕತೆಯಿದ್ದರೆ ತೆಗೆದುಕೊಳ್ಳುತ್ತೇವೆ.

Feeder channels to Dodagatta tank in Chitaldrug Taluk.

Q.—361. Sri MULKA GOVINDAREDDY (Chitaldrug).—

Will the Government be pleased to state:—

(*a*) when the applications or representations were made for opening feeder channels to Dodagatta Tank in Chitaldrug Taluk and by whom;

(*b*) whether any estimates have been prepared;

(*c*) when they will undertake this work?